## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2169

ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 18.03.2022.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸಾರಿಗೆ ಇಲಾಖೆಯ ಅಧೀನದಲ್ಲಿ ಎಷ್ಟು ನಿಗಮ/ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿವೆ; ಸದರಿ ನಿಗಮ/ ಮಂಡಳಿಗಳಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; (ವೃಂದವಾರು ವಿವರ ನೀಡುವುದು) | ಸಾರಿಗೆ ಇಲಾಖೆಯ ಅಧೀನದಲ್ಲಿ ನಾಲ್ಕೂ ಸಾರಿಗೆ ನಿಗಮಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಸದರಿ ನಿಗಮಗಳಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿದೆ:- |

| ವೃಂದ | ಕ.ರಾ.ರ.ಸಾ. ನಿಗಮ | ಬೆಂ.ಮ.ಸ. ಸಂಸ್ಥೆ | ವಾ.ಕ.ರ.ಸಾ.ಸಂಸ್ಥೆ | ಕ.ಕ.ರ.ಸಾ. ನಿಗಮ |
|---|---|---|---|---|
| ಎ | 186 | 67 | 77 | 97 |
| ಬಿ | 226 | 84 | 152 | 150 |
| ಸಿ | 41152 | 35212 | 22495 | 21155 |
| ಡಿ | 597 | 98 | 355 | 322 |
| ಒಟ್ಟು | **42161** | **35461** | **23079** | **21724** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ. | ಅವುಗಳಲ್ಲಿ ಖಾಯಂ ಗುತ್ತಿಗೆ ಆಧಾರದ ಮೇಲೆ ಮತ್ತು ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; | ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ಖಾಯಂ ಗುತ್ತಿಗೆ ಆಧಾರದ ಮೇಲೆ ಮತ್ತು ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರ ಈ ಕೆಳಕಂಡಂತಿದೆ. :- |

| ವೃಂದ | ಕ.ರಾ.ರ.ಸಾ.ನಿಗಮ | ಬೆಂ.ಮಸ. ಸಂಸ್ಥೆ | ವಾ.ಕ.ರ. ಸಾ.ಸಂಸ್ಥೆ | ಕ.ಕ.ರ.ಸಾ.ನಿಗಮ |
|---|---|---|---|---|
| | ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ | | | |
| ಗುತ್ತಿಗೆ ಆಧಾರ | 1 | - | - | - |
| ದಿನಗೂಲಿ | 11 | - | - | - |



Generated from eOffice by B SREERAMULU, TD-MIN(BS), TRANSPORT MINISTER, Trans on 18/03/2022 09:59 AM

| | | |
|---|---|---|
| | | ಒಟ್ಟು 12 - - - <br>ಕ.ಕ.ರ.ಸಾ.ನಿಗಮದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ 11 ಖಾಸಗಿ ಸಾಫ್‌ವೇರ್ ಇಂಜಿನಿಯರ್‌ರನ್ನು ನಿಯಮಾನುಸಾರ ಪಡೆಯಲಾಗಿದೆ ಮತ್ತು ಬೆಂ.ಮ..ಸಾಸಂಸ್ಥೆಯಲ್ಲಿ ಒಟ್ಟು 8 ಜನ ಇಂಜಿನಿಯರ್‌ಗಳು ಹೊರಗುತ್ತಿಗೆ ಅಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. |
| ಇ. | ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ವೃಂದವಾರು ವಿವರ ನೀಡುವುದು) | ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ಜನವರಿ-2022 ರ ಅಂತ್ಯಕ್ಕೆ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ :- |

| ವೃಂದ | ಕ.ರಾ.ರ.ಸಾ. ನಿಗಮ | ಬೆಂ.ಮಸ.ಸಂಸ್ಥೆ | ವಾ.ಕ.ರ.ಸಾ.ಸಂಸ್ಥೆ | ಕ.ಕ.ರ.ಸಾ. ನಿಗಮ |
|---|---|---|---|---|
| | ಖಾಲಿಯಿರುವ ಹುದ್ದೆಗಳ ಸಂಖ್ಯೆ | | | |
| ಎ | 43 | - | 4 | 26 |
| ಬಿ | 34 | 23 | 56 | 72 |
| ಸಿ | 6125 | 5570 | 2321 | 2249 |
| ಡಿ | 44 | 18 | 31 | 14 |
| ಒಟ್ಟು | **6246** | **5611** | **2412** | **2361** |

| | | |
|---|---|---|
| ಈ. | ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಗಳು ಪ್ರಸ್ತುತ ಯಾವ ಹಂತದಲ್ಲಿವೆ; ಯಾವ ಕಾಲಮಿತಿಯಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು; (ವಿವರವಾದ ಮಾಹಿತಿ ನೀಡುವುದು) | ಕ.ರಾ.ರ.ಸಾ.ನಿಗಮ<br>ನಾಲ್ಕೂ ಸಾರಿಗೆ ಸಂಸ್ಥೆಗಳ ಅಧಿಕಾರಿಗಳು ಹಾಗೂ ಮೇಲ್ವಿಚಾರಕ ಸಿಬ್ಬಂದಿಗಳ ನೇಮಕಾತಿಯನ್ನು ಕ.ರಾ.ರ.ಸಾ. ನಿಗಮದಲ್ಲಿ ನಿರ್ವಹಿಸಲಾಗುತ್ತಿದೆ.<br>ಖಾಲಿ ಇರುವ ಹುದ್ದೆಗಳ ಪೈಕಿ ಮುಂಬಡ್ತಿಗೆ ಮೀಸಲಾದ ಹುದ್ದೆಗಳನ್ನು ಸಂಸ್ಥೆಯ ಅಗತ್ಯತೆಗನುಗುಣವಾಗಿ ತುಂಬಲಾಗುತ್ತಿದೆ. |
| ಉ. | ಇಲ್ಲವಾದಲ್ಲಿ, ನೇಮಕಾತಿ ಮಾಡಿಕೊಳ್ಳದಿರಲು ಕಾರಣಗಳೇನು? | |

| ನೇಮಕಾತಿ ಹುದ್ದೆ/ ಸಂಖ್ಯೆ | ಷರಾ |
|---|---|
| ತಾಂತ್ರಿಕ ಸಹಾಯಕ 726 | ಸಾಮಾನ್ಯ ಸಾಮರ್ಥ ಪರೀಕ್ಷೆ ನಡೆಸಿ ಅಂಕಗಳನ್ನು ಪ್ರಕಟಿಸಲಾಗಿದೆ. ಮೂಲ ದಾಖಲಾತಿ/ ದೇಹದಾಢ್ಯತೆ ಪರಿಶೀಲನೆಗೆ ಬಾಕಿ ಇರುತ್ತದೆ. |
| ಭದ್ರತಾ ರಕ್ಷಕ | ಸಾಮಾನ್ಯ ಸಾಮರ್ಥ ಪರೀಕ್ಷೆ ನಡೆಸಿ ಅಂಕಗಳನ್ನು ಪ್ರಕಟಿಸಲಾಗಿದೆ. ಮ |



Generated from eOffice by B SREERAMULU, TD-MIN(BS), TRANSPORT MINISTER, Trans on 18/03/2022 09:59 AM

| | |
|---|---|
| 200 | ೂಲ ದಾಖಲಾತಿ, ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಗಾಗಿ ಬಾಕಿ ಇರುತ್ತದೆ. |
| ಚಾಲಕ 1200<br>ಚಾ/ನಿ 2545 | ಜಾಹೀರಾತು ಪ್ರಕಟಿಸಿ, ಆನ್‌ಲೈನ್ ಮೂಲ ಅರ್ಜಿಗಳನ್ನು ಸ್ವೀಕರಿಸಿದ್ದು, ಅವರುಗಳಿಗೆ ಚಾಲನಾ ವೃತ್ತಿ ಪರೀಕ್ಷೆ ನಡೆಸಬೇಕಾಗಿರುತ್ತದೆ. |

ನೇರ ನೇಮಕಾತಿ ಹುದ್ದೆಗಳನ್ನು ತುಂಬಿಕೊಳ್ಳಲು ಈ ಮೇಲ್ಕಂಡಂತೆ ಅಧಿಸೂಚಿಸಲಾಗಿದ್ದು, ಕೋವಿಡ್-19 ವೈರಾಣು ವ್ಯಾಪಿಸಿರುವ ಹಿನ್ನೆಲೆಯಲ್ಲಿ ದಿನಾಂಕ:20-05-2020ರ ನಿಗಮದ ನಿರ್ದೇಶಕ ಮಂಡಳಿಯ ತೀರ್ಮಾನದಂತೆ ಎಲ್ಲಾ ನೇರ ನೇಮಕಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

| | |
|---|---|
| ಕಛೇರಿ ಸಹಾಯಕ ( ತೋಟಗಾರಿಕೆ)<br>ಹಿಂಬಾಕಿ-01 ಹುದ್ದೆ | ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

**ಬೆಂ.ಮ.ಸಾ.ಸಂಸ್ಥೆ**

ದರ್ಜೆ-3 (ಮೇಲ್ವಿಚಾರಕೇತರ) (ಸಿ-ವೃಂದ) ಮತ್ತು ದರ್ಜೆ-4 (ಡಿ-ವೃಂದ)ಕ್ಕೆ ಸೇರಿದ ಹುದ್ದೆಗಳನ್ನು ಮಾತ್ರ ಬೆಂ.ಮ.ಸಾ.ಸಂಸ್ಥೆಯಲ್ಲಿ ನಿಯಮಾನುಸಾರ ನೇರ ನೇಮಕಾತಿ ಮೂಲಕ ಭರ್ತಿಗೊಳಿಸಬೇಕಾಗಿದ್ದು, ಹಾಲಿ ಸಂಸ್ಥೆಯಲ್ಲಿ ಆಚರಣೆಗೊಳಿಸಲಾಗುತ್ತಿರುವ ಅನುಸೂಚಿಗಳಿಗೆ ಅಗತ್ಯವಿರುವ ಪ್ರಮಾಣದಲ್ಲಿ ಸಿಬ್ಬಂದಿಗಳು ಲಭ್ಯವಿದ್ದು, ಸಿಬ್ಬಂದಿಗಳ ಕೊರತೆ ಇರುವುದಿಲ್ಲ. ಆದುದರಿಂದ ಪ್ರಸ್ತುತ ನೇಮಕಾತಿ ಅಗತ್ಯತೆ ಇರುವುದಿಲ್ಲ.

**ವಾ.ಕ.ರ.ಸಾ.ಸಂಸ್ಥೆ**

ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ರ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ, ಪ್ರಸ್ತುತ ಸಂಸ್ಥೆಯಲ್ಲಿ 2500 ಚಾಲಕ, 55 ಚಾಲಕ ಬ್ಯಾಕ್‌ಲಾಗ್ ಮತ್ತು 259 ಚಾಲಕ ಕಂ ನಿರ್ವಾಹಕ ಬ್ಯಾಕ್‌ಲಾಗ್ ಒಟ್ಟು 2814 ಹುದ್ದೆಗಳ ನೇಮಕಾತಿಗೆ ಜಾಹೀರಾತು ನೀಡಲಾಗಿರುತ್ತದೆ. ಈ ಕೊರತೆಯು ಕೋವಿಡ್ ಪೂರ್ವದಲ್ಲಿ ಕಾರ್ಯಚರಣೆಯಾಗುತ್ತಿದ್ದ 4676 ಅನುಸೂಚಿಗಳದ್ದು, ಆದರೆ, ಚಾಲನಾ ಸಿಬ್ಬಂದಿಗಳ ಅವಶ್ಯಕತೆಯನ್ನು ಕಾರ್ಯಾಯೋಜನೆ ಅನುಸಾರ ಮುಂದಿನ ದಿನಗಳಲ್ಲಿ ಕಾರ್ಯಾಚರಣೆಗೊಳಿಸುವ ಅನುಸೂಚಿಗಳ



Generated from eOffice by B SREERAMULU, TD-MIN(BS), TRANSPORT MINISTER, Trans on 18/03/2022 09:59 AM

| | | |
|---|---|---|
| | | ಸಂಖ್ಯೆಗೆ ಲೆಕ್ಕಾಚಾರ ಮಾಡಲಾಗಿದ್ದು, ಅದರನುಸಾರ 4856 ಅನುಸೂಚಿಗಳಿಗೆ (ಪ್ರತಿ ಅನುಸೂಚಿಗೆ 3.72 ಅನುಪಾತದಂತೆ) ಮತ್ತು ನಿಧನ/ ನಿವೃತ್ತಿ ಇತರೆ ಕಾರಣಗಳಿಂದ ತೆರವಾಗುವ ಸ್ಥಾನಗಳನ್ನು ಗಣನೆಗೆ ತೆಗೆದುಕೊಂಡು ಹಿಂದಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಒಳಗೊಂಡಂತೆ ಒಟ್ಟು 2814 ಹುದ್ದೆಗಳಿಗೆ ಜಾಹೀರಾತು ನೀಡಲಾಗಿರುತ್ತದೆ.<br><br>ಕ.ಕ.ರ.ಸಾ.ನಿಗಮ<br><br>ಸರ್ಕಾರದಿಂದ 2539 ಹುದ್ದೆಗಳ ನೇಮಕಾತಿಗೆ ಅನುಮತಿ ಪಡೆದು, 925-ಚಾಲಕ ಹುದ್ದೆ ಮತ್ತು 694-ಚಾಲಕ-ಕಂ-ನಿರ್ವಾಹಕ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಕೋವಿಡ್-19ರ ಕಾರಣ ಸರ್ಕಾರದ ನಿರ್ದೇಶನದಂತೆ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು.<br><br>ಪ್ರಸ್ತುತ ಕೋವಿಡ್-19ರ ಪ್ರಭಾವ ಕಡಿಮೆಯಾದ ಕಾರಣ ಮೇಲಿನ ಅಧಿಸೂಚಿತ ಹುದ್ದೆಗಳು ಸೇರಿದಂತೆ 16-ಸಹಾಯಕ ಲೆಕ್ಕಿಗ ಮತ್ತು 300-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮತ್ತು 59 ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರವು ದಿನಾಂಕ: 18.01.2022 ರಲ್ಲಿ ಅನುಮತಿ ನೀಡಿರುತ್ತದೆ.<br><br>ಪ್ರಸ್ತುತ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ನೇಮಕಾತಿ ಪ್ರಕ್ರಿಯೆಗಳನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸಲಾವುದು.<br><br>ಮುಂದುವರೆದು, ಕ.ರಾ.ರ.ಸಾ.ನಿಗಮ, ಬೆಂ.ಮ.ಸಾ.ಸಂಸ್ಥೆ ಮತ್ತು ವಾ.ಕ.ರ.ಸಾ.ಸಂಸ್ಥೆಗಳಲ್ಲಿ ಕೋವಿಡ್-19ರ ಹಿನ್ನೆಲೆಯಲ್ಲಿ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಲು ಹಾಗೂ ಆರ್ಥಿಕ ಇಲಾಖೆಯಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020 ದಿನಾಂಕ:06.07.2020ರಲ್ಲಿ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ. |

ಸಂಖ್ಯೆ: ಟಿಡಿ 117 ಟಿಸಿಕ್ಯೂ 2022

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು



Generated from eOffice by B SREERAMULU, TD-MIN(BS), TRANSPORT MINISTER, Trans on 18/03/2022 09:59 AM